ಉದಯವಾಣಿ
ಕನ್ನಡ ದಿನಪತ್ರಿಕೆ

Saturday, April 3rd, 2010

# ಎಸ್‌ಎಇ ವೈಮಾನಿಕ ಸ್ಪರ್ಧೆಯಲ್ಲಿ ಜೈನ್ ಕಾಲೇಜಿಗೆ ಪ್ರಥಮ ಸ್ಥಾನ

ಬೆಂಗಳೂರು, ಏ. 2 : ಕ್ಯಾಲಿಫೋರ್ನಿಯಾದಲ್ಲಿ ನಡೆದ 'ಎಸ್‌ಎಇ ವೈಮಾನಿಕ ವಿನ್ಯಾಸ (ಪಶ್ಚಿಮ) ಸ್ಪರ್ಧೆ -2010' ರಲ್ಲಿ ಭಗವಾನ್ ಮಹಾವೀರ್ ಜೈನ್ ಇಂಜಿನಿಯರಿಂಗ್ ಕಾಲೇಜಿಗೆ ಪ್ರಥಮ ಸ್ಥಾನ ಲಭ್ಯವಾಗಿದೆ.

ಪ್ರಥಮ ಬಾರಿಗೆ ಭಾರತದಿಂದ ಪ್ರತಿನಿಧಿಸಿದ ಇಂಜಿನಿಯರಿಂಗ್ ಕಾಲೇಜು ಈ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ತನ್ನದಾಗಿಸಿಕೊಂಡಿದೆ. ಪ್ರಥಮ ಸ್ಥಾನವಷ್ಟೇ ಅಲ್ಲದೆ, ಹಾರಾಟದಲ್ಲಿ ಮೂರನೇ ಸ್ಥಾನವನ್ನು ಪಡೆದುಕೊಂಡಿದೆ ಎಂದು ಜೈನ್ ವಿಶ್ವವಿದ್ಯಾಲಯದ ಅಧಿಕೃತ ಪ್ರಕಟಣೆ ತಿಳಿಸಿದೆ.

ಸ್ಪರ್ಧೆಯಲ್ಲಿ 44 ತಂಡಗಳು ಪಾಲ್ಗೊಂಡಿದ್ದವು. ಅಮೆರಿಕ, ಯೂರೋಪ್‌ನ ತಂಡಗಳು ಸ್ಪರ್ಧೆಯಲ್ಲಿ ತೀವ್ರ ತರವಾದ ಸ್ಪರ್ಧೆ ನೀಡಿದ್ದವು. ಅಂತಿಮವಾಗಿ ಭಾರತೀಯ ತಂಡ ಸ್ಪರ್ಧಿಗಳಲ್ಲಿ ಅತ್ಯುತ್ತಮ ತಂಡವೆಂದು ಪರಿಗಣನೆಗೊಂಡು ಪ್ರಥಮ ಸ್ಥಾನವನ್ನು ತನ್ನದಾಗಿಸಿಕೊಂಡಿದೆ. ವೈಮಾನಿಕ ವಿನ್ಯಾಸದ, ಮೌಖಿಕ ಪ್ರಾತ್ಯಕ್ಷತೆಗೆ ಪ್ರಥಮ ಸ್ಥಾನ ದೊರೆತಿದೆ.

ನಾಸಾ, ಲಾಕಿಡ್ ಮಾರ್ಟಿನ್‌ನ ಸಹಯೋಗದೊಂದಿಗೆ ಸೊಸೈಟಿ ಆಫ್ ಆಟೋಮೋಟಿವ್ ಇಂಜಿನಿಯರ್ಸ್ (ಎಸ್‌ಎಇ) ಸ್ಪರ್ಧೆಯನ್ನು ಸಂಘಟಿಸಿತ್ತು.

ಚಂದನ್ ಪ್ರಸಾದ್, ದರ್ಶನ್ ಎನ್.ಆರ್., ಅನುರಾಗ್ ಜೋಷಿ, ಶ್ರೇಯಸ್ ರೆಡ್ಡಿ, ನಿಖಿಲ್‌ಪಾಂಡೆ, ಶ್ರೇಯಸ್ ಡಿ.ಎಸ್., ರವಿ ತೇಜಾ, ಜಾರ್ಜ್ ಮ್ಯಾಥ್ಯೂ ತಂಡದಲ್ಲಿ ಪಾಲ್ಗೊಂಡಿದ್ದ ಇಂಜಿನಿಯರಿಂಗ್ ವಿದ್ಯಾರ್ಥಿಗಳು. ಡಾ। ಕೃಷ್ಣ ವೆಂಕಟೇಶ್, ಸಂತೋಷ್ ಎಂ.ಎಸ್., ಟಿ.ಪಿ.ನಿತಿನ್, ಕೃಷ್ಣ ಕಿಶೋರ್, ಟಿ.ಎನ್. ನವೀನ್, ಎಸ್. ಪ್ರಜ್ವಲ್, ವಿದ್ಯಾರ್ಥಿ ತಂಡದೊಂದಿಗೆ ತೆರಳಿದ್ದ ಜೈನ್ ಇಂಜಿನಿಯರಿಂಗ್ ಕಾಲೇಜಿನ ಸಿಬ್ಬಂದಿ.